

ನದಿ, ಕಾಲುವೆಗಳು ಹಾಗೂ
ದೇವಘಾಟ್‌ನ ನೋಟ

ಕೊನೆಗೊಳಿಸಿ ಕಲ್ಯಾಣಿ ಚಾಲುಕ್ಯರು ಅಧಿಕಾರಕ್ಕೆ ಬಂದರು. ರಾಷ್ಟ್ರಕೂಟರ ಸಾಮಂತರಾಗಿದ್ದ ನೊಳಂಬ ಪಲ್ಲವರು ಕಲ್ಯಾಣಿ ಚಾಲುಕ್ಯರ ಸಾರ್ವಭೌಮತ್ವವನ್ನು ಒಪ್ಪಿಕೊಂಡು ಅವರ ನೊಳಂಬವಾಡಿ ರಾಜ್ಯಕ್ಕೆ ಕಂಪ್ಲಿಯನ್ನು ನೂತನ ರಾಜಧಾನಿಯನ್ನಾಗಿಸಿಕೊಂಡರು.

ಈ ಮನೆತನದಲ್ಲಿ ಕ್ರಿ.ಶ. 1071ರಿಂದ 1144ರವರೆಗೆ ಆಡಳಿತ ನಡೆಸಿದ ಜಗದೇಕಮಲ್ಲ ನೊಳಂಬ ಪೆರ್ಮಾನಡಿ ಉದಯಾದಿತ್ಯನು ಕಂಪ್ಲಿಯ ಜೊತೆಗೆ ತುಂಗಭದ್ರಾ ನದಿ ತೀರದ ವಿಪ್ರನಾರಾಯಣ ಎಂಬ ಸ್ಥಳವನ್ನು ಹೊಸ ರಾಜಧಾನಿಯನ್ನಾಗಿ ಮಾಡಿಕೊಂಡು ಆಡಳಿತ ನಡೆಸಿದ ಎಂದು ದೇವಘಾಟ್ ಮತ್ತು ಬಳ್ಳಾರಿ ಜಿಲ್ಲೆಯ ಕಲ್ಕಂಭ ಮತ್ತು ಹಳೇ ನೆಲ್ಲುಡಿ ಗ್ರಾಮಗಳಲ್ಲಿರುವ ಶಿಲಾಶಾಸನಗಳು ತಿಳಿಸುತ್ತವೆ. ದೇವಘಾಟ್ ಸುತ್ತಮುತ್ತಲ ಪ್ರದೇಶವೇ ವಿಪ್ರನಾರಾಯಣ. ಇಂದು ಇದಕ್ಕೆ ವಿಪ್ರ ಎಂದು ಚುಟುಕಾಗಿ ಕರೆಯಲಾಗುತ್ತದೆ.

ದೇವಘಾಟ್‌ನಲ್ಲಿ ಕ್ರಿ.ಶ. 1094ರ ಶಾಸನವಿದ್ದು, ಅದರಲ್ಲಿ ಉದಯಾದಿತ್ಯನನ್ನು ತ್ರಿಭುವನಮಲ್ಲ ಪಾಂಡ್ಯ ವೀರನೊಳಂಬ ಪಲ್ಲವ ಪೆರ್ಮಾನಡಿ ಎಂದು ಕರೆಯಲಾಗಿದೆ. ಅವನು ಮಲೆಯಾರಿ ಪಂಡಿತರಿಗೆ ಮತ್ತು ಕಂಪಿಲೆಯ ಗವರೇಶ್ವರ, ಸಿದ್ದೇಶ್ವರ ದೇವರಿಗೆ ದಾನ ನೀಡಿದ ಉಲ್ಲೇಖವಿದೆ. ಇಲ್ಲಿನ ಮತ್ತೊಂದು ಶಾಸನವು ಕ್ರಿ.ಶ. 1096ರ ಕಲ್ಯಾಣಿ ಚಾಲುಕ್ಯ ತ್ರೈಲೋಕ್ಯಮಲ್ಲ 1ನೇ ಸೋಮೇಶ್ವರನ ಕಾಲದ್ದಾಗಿದೆ. ಅದರಲ್ಲಿ ವಿಪ್ರನಾರಾಯಣವು ತುಂಗಭದ್ರೆಯ ಉತ್ತರ ದಡದಲ್ಲಿನ ಕಿಷ್ಕಿಂಧಾ ಪರ್ವತದಲ್ಲಿದೆ, ಅದರಲ್ಲಿ ಮಹಾನ್ ಯತಿಗಳು ವಾಸಿಸುತ್ತಾರೆ, ಅಲ್ಲಿ 30 ತೀರ್ಥಗಳಿವೆ ಮುಂತಾದ ಮಾಹಿತಿ ಒಳಗೊಂಡಿದೆ.

ಕಲ್ಯಾಣ ಚಾಲುಕ್ಯರು ಮತ್ತು ಉದಯಾದಿತ್ಯ ಮಹಾರಾಜರ ಕಾಲದಲ್ಲಿ ನಿರ್ಮಾಣವಾದ ಈ ದೇವಾಲಯ, ಹಂಪಿ ಪಂಪಾಕ್ಷೇತ್ರದ ಈಶಾನ್ಯ ದಿಕ್ಕಿನ ಉಪದ್ವಾರವಾಗಿದೆ. ಗಂಗಾವತಿ ಮತ್ತು ಆನೆಗೊಂದಿ ಇತಿಹಾಸ ತಿಳಿದುಕೊಳ್ಳಲು ಮೊದಲು ಪ್ರಾರಂಭವಾಗುವುದು ಈ ಅಮೃತೇಶ್ವರ ದೇವಸ್ಥಾನದಿಂದ ಎಂದು ಇತಿಹಾಸದಲ್ಲಿ ಉಲ್ಲೇಖವಾಗಿದೆ. ಅಮೃತೇಶ್ವರ ದೇವಸ್ಥಾನದ ಸುತ್ತಲೂ ಪಂಚಲಿಂಗೇಶ್ವರ, ಲಕ್ಷ್ಮಿ–ಪಾರ್ವತಿ, ಎಂಟು ಶಿವ ಲಿಂಗಗಳು, 12 ಮತ್ತು 15 ಕಲ್ಲು ಕಂಬಗಳ ಮಂಟಪ ಮತ್ತು ಶಾಸನಗಳನ್ನೂ ನೋಡಬಹುದು. ಚಾಲುಕ್ಯರ ನಂತರ ಕ್ರಿ.ಶ. 1336ರಲ್ಲಿ ಅಧಿಕಾರಕ್ಕೆ ಬಂದ ವಿಜಯನಗರ ಅರಸರು ದೇವಘಾಟನ್ನು ಮತ್ತಷ್ಟು ಅಭಿವೃದ್ಧಿಪಡಿಸಿರುವ ಸಾಧ್ಯತೆಗಳಿವೆ.



ದೇವಘಾಟ್‌ನಲ್ಲಿರುವ ಶಾಸನ

## ಜೋಡಿ ಕಾಲುವೆಗಳು

ದೇವಘಾಟ್ ಬಳಿ ಹರಿಯುವ ನೀರಾವರಿ ಕಾಲುವೆಗಳಿಗೆ ವಿಜಯನಗರ ಕಾಲದ ಗಂಗಾವತಿ ಮೇಲ್ದಂಡೆ ಮತ್ತು ಕೆಳದಂಡೆ ಕಾಲುವೆಗಳೆಂದು ಕರ್ನಾಟಕ ನೀರಾವರಿ ನಿಗಮದ ದಾಖಲೆಗಳು ತಿಳಿಸುತ್ತವೆ. ಆದರೆ ಹಳೆಯ ದಾಖಲೆಗಳಲ್ಲಿ ಇವುಗಳಿಗೆ ಹಿರೇಜಂತಕಲ್ ಮತ್ತು ಚಿಕ್ಕಜಂತಕಲ್ ಕಾಲುವೆಗಳು ಹಾಗೂ ಗಂಗಾವತಿ ಮೇಲಣ ಮತ್ತು ಕೆಳಗಣ ಕಾಲುವೆಗಳೆಂತಲೂ ಕರೆಯಲಾಗಿದೆ.

ಹೊಸಪೇಟೆಯಿಂದ ರಾಯಚೂರಿನ ಬಿಚ್ಚಾಲಿ ಗ್ರಾಮದವರೆಗೆ ತುಂಗಭದ್ರಾ ನದಿಯ ಎಡ–ಬಲದಲ್ಲಿರುವ 16 ಕಾಲುವೆಗಳನ್ನೂ ‘ವಿಜಯನಗರ ಕಾಲುವೆ’ಗಳೆಂದು ಸಾಮಾನ್ಯವಾಗಿ ಕರೆಯಲಾಗುತ್ತದೆ. ಆದರೆ ವಾಸ್ತವವಾಗಿ ದೇವಘಾಟ್ ಬಳಿ ಹರಿಯುವ ಕಾಲುವೆಗಳು ವಿಜಯನಗರ ಕಾಲಕ್ಕಿಂತ ಮುಂಚೆಯೇ ಇದ್ದಿರಬಹುದು. ದೇವಘಾಟ್ ಸುತ್ತಮುತ್ತಲ ಪ್ರದೇಶ 9–10ನೇ ಶತಮಾನದಲ್ಲಿಯೇ ಉಪರಾಜಧಾನಿಯಾಗಿತ್ತು ಎಂದರೆ ಇಲ್ಲಿನ ಜನವಸತಿ, ಸೈನ್ಯ, ಕೃಷಿ ಹಾಗೂ ಇನ್ನಿತರ ಬಳಕೆಗೆ ಬೇಕಾದ ನೀರು ಪೂರೈಸಲು ಕಾಲುವೆ ನಿರ್ಮಿಸಿರುವ ಸಾಧ್ಯತೆ ಇದೆ.

ಗಂಗಾವತಿಗೆ ಕೆಲವೇ ಮೈಲಿ ದೂರದಲ್ಲಿರುವ ಹುಲಿಗಿ ಬಳಿ ತುಂಗಭದ್ರಾ ನದಿಗೆ ಕ್ರಿ.ಶ. 1088ರಲ್ಲಿ ಚಾಲುಕ್ಯರು ಅಣೆಕಟ್ಟು ನಿರ್ಮಿಸಿದ್ದರ ಬಗ್ಗೆ ಶಾಸನವೊಂದು ಹುಲಿಗಿ ಬಳಿಯ ಸೋಮೇಶ್ವರ ದೇವಾಲಯದಲ್ಲಿ ಇಂದಿಗೂ ಲಭ್ಯವಿದೆ. ಹಾಗಾಗಿ ದೇವಘಾಟ್ ಬಳಿ ಹರಿಯುವ ಎರಡೂ ಕಾಲುವೆಗಳು ಚಾಲುಕ್ಯರ ಅವಧಿಯಲ್ಲೇ ನಿರ್ಮಾಣವಾಗಿರುವುದರಲ್ಲಿ ಅನುಮಾನವಿಲ್ಲ. ನಂತರ ವಿಜಯನಗರ ಅರಸರು ಅಭಿವೃದ್ಧಿಪಡಿಸಿರಬಹುದು. ದೇವಘಾಟಿನ ತುಸು ಮೇಲ್ಭಾಗದಲ್ಲಿ ನದಿಯ ಒಳಗೆ ಸ್ಥಳೀಯವಾಗಿ ಸಿಗುವ ಕಲ್ಲು ಗುಂಡುಗಳನ್ನು ಬಳಸಿ ಅಣೆಕಟ್ಟುಗಳನ್ನು ನಿರ್ಮಿಸಲಾಗಿದೆ. ಒಂದು ಕಿ.ಮೀ. ಅಂತರದಲ್ಲಿ ಎರಡೂ ಕಾಲುವೆಗಳು ಆರಂಭವಾಗುತ್ತವೆ. ಸ್ವಲ್ಪ ದೂರ ಅಕ್ಕಪಕ್ಕದಲ್ಲೇ ಸಾಗುವ ಇವು ಮುಂದುವರಿದು ಮೇಲಣ ಕಾಲುವೆಯು ಹಿರೇಜಂತಕಲ್ ಅಚ್ಚುಕಟ್ಟು ಹಾಗೂ ಕೆಳಗಣ ಕಾಲುವೆಯು ಚಿಕ್ಕಜಂತಕಲ್‌ವರೆಗೆ ಸಾಗುತ್ತವೆ. ಈ ಎರಡೂ ಕಾಲುವೆಗಳು ದೇವಘಾಟ್ ಸ್ಮಾರಕಗಳ ಸಂಕೀರ್ಣಕ್ಕೆ ಒಂದು ಜೋಡಿ ಹೂವಿನ ಹಾರದಂತೆ ಕಂಗೊಳಿಸುತ್ತವೆ.

ಇಷ್ಟೆಲ್ಲಾ ಮಹತ್ವವಿದ್ದರೂ ಈ ಸ್ಥಳ, ಸಂರಕ್ಷಣೆ ಕೊರತೆಯಿಂದ ಅಸ್ತಿತ್ವ ಕಳೆದುಕೊಳ್ಳುತ್ತಿದೆ. ಇಸ್ಪೀಟು ಆಡುವವರ ತಾಣವಾಗಿ, ಮಳೆ ಬಂದಾಗ ಕುರಿ–ಮೇಕೆಗಳನ್ನು ಮಂಟಪದಲ್ಲಿ ಒಡ್ಡುತ್ತಾರೆ. ನಿಧಿಗಳ್ಳರು ಅಲ್ಲಲ್ಲಿ ಅಗೆದು ವಿರೂಪಗೊಳಿಸುವುದು ವರದಿಯಾಗುತ್ತಿರುತ್ತದೆ. ಈಚೆಗೆ ಕೆಲವರು ಸುಣ್ಣಬಣ್ಣ ಬಳಿದಿದ್ದು, ಸಾವಿರ ವರ್ಷಗಳ ಇತಿಹಾಸವಿರುವ ಸ್ಮಾರಕಗಳು, ಶಾಸನಗಳು ತಮ್ಮ ಮೂಲಸ್ವರೂಪ, ಐತಿಹಾಸಿಕ ಮಹತ್ವ ಕಳೆದುಕೊಳ್ಳುತ್ತಿವೆ.

ಪುರಾತತ್ವ ಇಲಾಖೆ, ನೀರಾವರಿ ನಿಗಮ, ಗಂಗಾವತಿಯ ಇತಿಹಾಸಪ್ರಿಯರು ಈ ಸ್ಥಳದ ಮೂಲ ಸ್ವರೂಪ ಉಳಿಸುವತ್ತ ತುರ್ತು ಗಮನಹರಿಸಬೇಕಿದೆ

ಪ್ರತಿಕ್ರಿಯಿಸಿ: feedback@sudha.co.in

ಕಾಲುವೆಗಳ ಮೇಲ್ಭಾಗದಲ್ಲಿರುವ
ಸ್ಮಾರಕಗಳ ಸಂಕೀರ್ಣ

